# ಆದಿಚುಂಚನಗಿರಿ

ಜುಲೈ 1991



ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳವರು ಇತ್ತೀಚೆಗೆ ಅಮೆರಿಕಾಕ್ಕೆ ಭೇಟಿ ನೀಡಿದಾಗ ಚಿಕಾಗೊ ನಗರದಲ್ಲಿರುವ ಶ್ರೀ ಸಿದ್ಧಲಿಂಗಯ್ಯನವರ ನಿವಾಸದಲ್ಲಿ ಪಾದಪೂಜೆ ಏರ್ಪಡಿಸಿದ್ದ ಸಂದರ್ಭ. ಶ್ರೀ ಸಿದ್ಧಲಿಂಗಯ್ಯನವರು ಅವರ ಧರ್ಮಪತ್ನಿ ಶ್ರೀಮತಿ ಜಯಮ್ಮನವರು. ಅವರ ಕುಮಾರ ಚಿ|ರಾ|ಪ್ರಶಾಂತ್ ರವರು ಶ್ರೀಗಳವರ ಎಡಭಾಗದಲ್ಲಿದ್ದಾರೆ. ಆದಿಚುಂಚನಗಿರಿ ವೈದ್ಯಕೀಯ [illegible] ಲಕ್ಷಾಂತರ ರೂಪಾಯಿ ಬೆಲೆಬಾಳುವ ಆಧುನಿಕ ಉಪಕರಣಗಳನ್ನು

# ಮಾನವ ಜನ್ಮ ದೊಡ್ಡದು

ಡಾ. ಸಿದ್ದಯ್ಯ ಪುರಾಣಿಕ

ಮಾನವ ಜನ್ಮ ದೊಡ್ಡದಾಗಿರುವುದು ಮನದ ಮಹಿಮೆಯಿಂದ. "ಜಗನ ಸುತ್ತಿಹುದು ನಿನ್ನ ಮಾಯೆ ನೋಡಯ್ಯ; ನಿನ್ನ ಸುತ್ತಿಹುದು ನನ್ನ ಮನ ನೋಡಯ್ಯ' ಎಂದು ಸಾರಿಲ್ಲವೆ ಬಸವಣ್ಣನವರು? ಮನ ಘನಮನವಾದರಂತೂ ಮಾನವ ಮಹಾ ಮಾನವನಾಗುತ್ತಾನೆ. ಆದುದರಿಂದ ಮಾನವ ಜನ್ಮವೆಂದರೆ ಇಹದಲ್ಲಿ ಮನದ ವಿಕಾಸಕ್ಕಾಗಿ ಮಾನವನು ಕೈಕೊಳ್ಳುವ ಸಾಧನ ಯಾತ್ರೆಯೆಂಬುದು ನನ್ನ ನಂಬಿಕೆ.

ಇದು ಎಲ್ಲ ಮಾನವರ ನಂಬಿಕೆಯೆಂದಾಗಲಿ. ಶರೀರ ಪೋಷಣೆಗೆ ಬೇಕಾಗುವ ಆಹಾರ, ವಸನ, ನಿದ್ರಾಮೈಥುನಾದಿಗಳು ನಗಣ್ಯವೆಂದಾಗಲಿ ನಾನು ತಿಳಿದಿಲ್ಲ. ತನುವಿನ ಆರೋಗ್ಯ ಮನದ ಆರೋಗ್ಯಕ್ಕೆ ಮೂಲಾಧಾರ; ತನುವಿನ ಶಕ್ತಿ ಮನದ ಶಕ್ತಿಗೆ ಬುನಾದಿ. ಆದರೆ ಕಾಲ, ದೇಶ, ಪರಿಸರ, ಅನುವಂಶಿಕತೆ, ಧಾರ್ಮಿಕ ಭಾವನೆಗಳು, ಜನಾಂಗೀಯ ಮೂಢನಂಬಿಕೆಗಳು, ಕೌಟುಂಬಿಕ ಶ್ರದ್ಧೆಗಳು, ಭೌಗೋಳಿಕ ವೈಲಕ್ಷಣ್ಯಗಳು, ವಾತಾವರಣದ ವಿಷಮತೆಗಳು ಇತ್ಯಾದಿಗಳ ಬಂಧನಗಳನ್ನು ಹರಿದು, ಭಾರವನ್ನು ಬಿಸಾಡಿ, ಮಿತಿಗಳನ್ನು ಅತಿಕ್ರಮಿಸಿ ಔನ್ನತ್ಯಕ್ಕೆ ಏರುವುದು ಮನದ ಶಕ್ತಿಯ ವಿಕಾಸದಿಂದ ಮಾತ್ರ ಸಾಧ್ಯವೆಂದು ಹೇಳಿದರೆ ತಪ್ಪಾಗಲಾರದು.

ಮನೋವಿಕಾಸವು ಸ್ವಪ್ರೇರಿತವೂ ಅಹುದು, ಇಚ್ಛಾ ಜ್ಞಾನ-ಕ್ರಿಯೆಗಳಿಂದ ಪ್ರೇಷಿತ, ಪೋಷಿತವೂ ಅಹುದು. ಮೊದಮೊದಲು ಮನವು ಸ್ನಾಯು ವ್ಯವಸ್ಥೆಯ ಮತ್ತು ಇತರ ಜೀವಾಂಗಗಳ ಬೆಳವಣಿಗೆಯೊಡನೆ ಬೆಳೆಯುತ್ತದೆ.; ಮನುಜನ ಜೀನ್ಸ್‌ಗಳಲ್ಲಿ ಮನೆಮಾಡಿರುವ ಅನುವಂಶಿಕತೆಯ ಪ್ರಭಾವಗಳ ಒತ್ತಡದಿಂದ ಕುದುರುತ್ತದೆ. ಆದರೆ ಈ ಬಗೆಯ ಬೆಳವಣಿಗೆ ಅಪೂರ್ಣವಾದುದು. ತನ್ನ ಮನದ ಪೂರ್ಣ ಬೆಳವಣಿಗೆಗೆ ತನ್ನ ಇಚ್ಛಾಶಕ್ತಿಯಿಂದ ತಾನೇ ಪ್ರಚೋದನೆ ನೀಡಬೇಕು. ಪರಿಸರವೂ ಅದಕ್ಕೆ ಪೋಷಕವಾಗಿರಬೇಕು. ಅದೂ ಮೊದಲ ಆರು ವರ್ಷಗಳ ಅವಧಿಯಲ್ಲಿ ಈ ಪ್ರಯತ್ನ, ಪ್ರೇರಣೆ, ಪ್ರೋತ್ಸಾಹಗಳು ಬಲವತ್ತರವಾದವುಗಳಾಗಿರಬೇಕು.

ಇದರ ಅನುಭವ ನನಗಾದುದು ನಾನು ಬಾಲಕನಾಗಿದ್ದಾಗ. ಸುದೈವದಿಂದ ನಾನು ದ್ಯಾಂಪುರವೆಂಬ ಸಣ್ಣ ಗ್ರಾಮದಲ್ಲಿ ಪಂಡಿತ ಕಲ್ಲಿನಾಥ ಶಾಸ್ತ್ರಿಗಳವರ ಪುತ್ರನಾಗಿ ಹುಟ್ಟಿದೆ. ನಾನು ಬೇರಾವ ಗ್ರಾಮದಲ್ಲಿ ಬೇರಾವ ತಂದೆಗೆ ಮಗನಾಗಿ ಹುಟ್ಟಿದ್ದರೂ ಈಗಿನಷ್ಟು ಮನೋವಿಕಾಸ ನನಗಾಗುತ್ತಿರಲಿಲ್ಲವೆಂಬುದು ನನ್ನ ಅನಿಸಿಕೆ. ದ್ಯಾಂಪುರ ಬಡಹಳ್ಳಿ; ಆದರೆ ಅದರಲ್ಲಿ ಕವಿಗಳು, ಶಿಕ್ಷಕರು, ಶಾಸ್ತ್ರಿಗಳು, ವೈದ್ಯರು, ವಾಗ್ಮಿಗಳು, ವಾದಿಗಳು ತುಂಬಿ ತುಳುಕುತ್ತಲಿದ್ದರು. ಅವರೆಲ್ಲರ ಪ್ರಭಾವದಿಂದ ನನ್ನ ವಿದ್ಯಾಲಾಲಸೆ ಕುಡಿಯೊಡೆಯಿತು. ಅವರ ಮಾತುಗಳನ್ನು ಕೇಳಿಯೇ ಬಹಳಷ್ಟು ಕಲಿತೆ. ಆ ಪಾಂಡಿತ್ಯದ ಪರಿಸರದ ಪ್ರಭಾವದಿಂದ ನನ್ನೂರಿನ ಅನೇಕ ಬಡವರ ಮಕ್ಕಳೂ ವಿದ್ಯಾವಂತರಾದರು; ಮನೋವಿಕಾಸವನ್ನು ಪಡೆದುಕೊಂಡರು. ಎಲ್ಲ ಹಳ್ಳಿಗಳೂ ನನ್ನ ಈ ಹಳ್ಳಿಯಂತೆ ಆಗಬಾರದೆ - ಎಂದು ಎಷ್ಟೋ ಸಲ ನನಗನಿಸಿದೆ. ಈಗಲೀಗ ಎಲ್ಲ ಹಳ್ಳಿಗಳಲ್ಲಿ ವಿದ್ಯಾಕಾಂಕ್ಷೆ ಕವಲೊಡೆಯುತ್ತಿರುವುದು ಸಂತಸದ ಸಂಗತಿ.

ಪ್ರಾರಂಭದ ಈ ಸಹಜ ವಿಕಾಸ ಮುಂದೆ ತುಂಬ ತೊಡಕಿನದಾಗುತ್ತದೆ. ಬಾಲ್ಯದಲ್ಲಿ ನಾವು ಪಡೆದುಕೊಂಡಿದ್ದ ನಂಬಿಕೆಗಳೆಲ್ಲ - ದೇವ ಧರ್ಮಗಳ, ಪಾಪ ಪುಣ್ಯಗಳ, ಸ್ವರ್ಗ ನರಕಗಳ, ಸದ್ಗುಣ ದುರ್ಗುಣಗಳ, ಜೀವನದ ಗೊತ್ತುಗುರಿಗಳ ಬಗೆಗಿನ ನಂಬಿಕೆಗಳೆಲ್ಲ ಹೊಸ ಜ್ಞಾನ-ವಿಜ್ಞಾನಗಳ ಬೆಳಕಿನಲ್ಲಿ ತೀಕ್ಷ್ಣ ಪರೀಕ್ಷೆಗೆ ಗುರಿಯಾಗುತ್ತವೆ. ಬುದ್ಧಿಯೇನೋ ಹೊಸ ಜ್ಞಾನ ತೀರ್ಮಾನಗಳನ್ನು ಒಪ್ಪಿಕೊಳ್ಳುತ್ತದೆ. ಆದರೆ ತಿಳುವಳಿಕೆಯ ನೆಲೆಯಲ್ಲಿ ಸ್ವೀಕರಿಸಿದುದನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಕಷ್ಟವಾಗುತ್ತ ಹೋಗುತ್ತದೆ. ಯಾಕೆಂದರೆ ಮನ ಬುದ್ಧಿಯಷ್ಟು ಸುಲಭವಾಗಿ ಈ ತೀರ್ಮಾನಗಳನ್ನು ಒಪ್ಪಿಕೊಳ್ಳುವುದಿಲ್ಲ. ಇದರಿಂದಾಗಿ ಜೀವನದ ಜೋಕಾಲಿ ಹಿಂದಕ್ಕೆ ಮುಂದಕ್ಕೆ ತೂಗ ತೊಡಗುತ್ತದೆ.

ಇದಕ್ಕೂ ತೊಡಕಿನ ವಿಷಯ ಇನ್ನೊಂದಿದೆ. ಹೊಸ ಜ್ಞಾನ-ವಿಜ್ಞಾನ ಒಮ್ಮೊಮ್ಮೆ ಹಳೆಯದನ್ನು ತಿರಸ್ಕರಿಸುತ್ತದೆ. ಒಮ್ಮೊಮ್ಮೆ ಪುರಸ್ಕರಿಸುತ್ತದೆ. ಕೋಪರ್ನಿಕಸ್ಸನ್ನು ನಮ್ಮ ಭೂಮಿಯು ಸೂರ್ಯನ ಉಪಗ್ರಹ ಮಾತ್ರವೆಂದೂ, ಅದೇ ಸೂರ್ಯನ ಸುತ್ತ ತಿರುಗುವುದೆಂದೂ ಸಿದ್ಧಗೊಳಿಸುತ್ತಲೇ ಟಾಲೆಮಿಯ ಜಗತ್ತು ಕುಸಿದು ಬಿದ್ದಿತು; ಚರ್ಚ್ ಭೀತಿಗೊಂಡಿತು: ಗೆಲಿಲಿಯೋನ ದಂಡನೆ ಈ ಕ್ರಾಂತಿಯನ್ನು ಇನ್ನೂ ಪುಷ್ಟೀಕರಿಸಲು ಅರಿಸ್ಟಾಟಲನ, ಸೇಂಟ್ ಥಾಮಸ್ ಅಕ್ವಿನಾಸನ, ಡ್ಯಾಂಡೇಯ ಜಗತ್ತುಗಳು ಮಾಯವಾದವು. ಅಂತೆಯೇ ಆಧುನಿಕ ಭೌತವಿಜ್ಞಾನದ ತೀರ್ಮಾನಗಳು ಅದ್ವೈತ ದರ್ಶನಕ್ಕೆ ಪುಷ್ಟಿಯನ್ನು ನೀಡಿವೆ. ಹೀಗೆ ವಿಜ್ಞಾನವೂ ಹೊಸ ಹೊಸ ತೀರ್ಪುಗಳನ್ನು ಕೊಡುತ್ತ ನಡೆದಿರುವಾಗ ಜೀವನದಲ್ಲಿ ಬಿಡುವುದಾವುದನ್ನು, ಹಿಡಿವುದಾವುದನ್ನು ಎಂಬ ದಂದುಗಕ್ಕೆ ಕೊನೆಯಿಲ್ಲದಾಗುತ್ತದೆ. ಆದರೂ ಇದನ್ನು ಎದುರಿಸುತ್ತ, ಹೊಸ ತೀರ್ಮಾನಗಳಿಗೆ ಹೊಂದಿಕೊಳ್ಳುತ್ತ ಹೋಗಲೇಬೇಕು. ಇದೇ ಮಾನವ ಜನ್ಮದ ದೊಡ್ಡತನ.

ವೈಚಾರಿಕ ಸ್ತರದಲ್ಲಿ ಮಾತ್ರ ಈ ಹೊಂದಾಣಿಕೆ ನಡೆದರೆ ಸಾಲದು. ಹೊಸ ಹೊಸ ಅನ್ವೇಷಣೆಗಳು ನಾವು ವಾಸಿಸುವ ಜಗತ್ತಿನಲ್ಲಿಯೂ ಅದ್ಭುತ ಪರಿವರ್ತನೆಗಳನ್ನು ತಂದು ಬಿಡುತ್ತವೆ. ಔದ್ಯೋಗಿಕ ಕ್ರಾಂತಿ, ತಾಂತ್ರಿಕ ಕ್ರಾಂತಿ, ಸಂಚಾರ ಸಾಧನಗಳ ಕ್ರಾಂತಿ, ಮಾರಕಾಸ್ತ್ರಗಳ ಕ್ರಾಂತಿ, ನಗರೀಕರಣದ ಸಮೂಹ ಮಾಧ್ಯಮಗಳ ಕ್ರಾಂತಿಗಳ ಪರಿಣಾಮವಾಗಿ ಮಾನವ ಜೀವನ ಸೌಕರ್ಯಗಳನ್ನು ಪಡೆಯುತ್ತದೆ, ಗಂಡಾಂತರಗಳನ್ನೂ ಎದುರಿಸುತ್ತದೆ, ದಿಟವಾವುದು ಸಟೆಯಾವುದು ಎಂಬುದು ತಿಳಿಯಲಾರದಷ್ಟು ಪ್ರಚಾರ, ಅಪಪ್ರಚಾರಗಳ ಸೆಳವಿಗೂ ಸಿಕ್ಕಿಕೊಳ್ಳುತ್ತದೆ, ವಾದ ಪ್ರತಿವಾದಗಳ ಝುಂಝಾವಾತಕ್ಕೂ ಒಳಗಾಗುತ್ತದೆ. ಈ ಸ್ತರದಲ್ಲಿಯೂ ಹೊಂದಾಣಿಕೆ ಅನಿವಾರ್ಯವಾಗುತ್ತದೆ. ಗಾಂಧೀಜಿಯವರು ಹೇಳಿದಂತೆ ಮನೆಯ,

ಮನದ ಕಿಟಕಿಗಳನ್ನು ತೆರೆದಿಟ್ಟು, ಎಲ್ಲ ದಿಕ್ಕುಗಳ ಗಾಳಿ ಬೆಳಕುಗಳನ್ನು ಸ್ವಾಗತಿಸುತ್ತ, ತಾನು ಗಾಳಿಗೆ ಹಾರಿ ಹೋಗದ ಹಾಗೆ ನೆಲದ ಮೇಲೆ ಗಟ್ಟಿಯಾಗಿ ನಿಲ್ಲುವುದನ್ನು ಕಲಿಯಬೇಕಾಗುತ್ತದೆ.

ಹೀಗೆ ಗಟ್ಟಿಯಾಗಿ ನಿಲ್ಲಬೇಕಾದರೆ ನಾವು ನಮ್ಮ ದೇಶದ ಪರಂಪರೆಯಲ್ಲಿ ಬೇರು ಬಿಡಬೇಕು. ದೇಶದ ಸಂಪ್ರದಾಯಗಳು ಬದಲಾಗಬಹುದು: ಹಳೆ ಮತಗಳ ಜೊತೆಗೆ ಹೊಸ ಮತಗಳು ಹುಟ್ಟಬಹುದು; ವೇಷ ಭೂಷಣಗಳು, ಆಹಾರ ವಿಹಾರ ಆಚಾರಗಳು ಪರಿವರ್ತನೆಗೊಳ್ಳಬಹುದು. ಆದರೆ ಪರಂಪರೆ ಆಯಾದೇಶದ ಸಾವಿರಾರು ವರ್ಷಗಳ ಕೋಟ್ಯಾನುಕೋಟಿ ನಿವಾಸಿಗಳ ಜೀವನ ಧರ್ಮದ ಸಾರಸಂಗ್ರಹವಾಗಿ, ಅವಿಚ್ಛಿನ್ನವಾಹಿನಿಯಾಗಿ ನಿರಂತರ ಹರಿಯುವುದು. ಅದರಲ್ಲಿ ಬೇರು ಬಿಡುವುದೆಂದರೆ ಹೊರಗಿನ, ಒಳಗಿನ ಬಿರುಗಾಳಿಗಳಿಗೆ ವಿಚಲಿತವಾಗದಂಥ ಗಟ್ಟಿತನವನ್ನು ಗಳಿಸಿಕೊಳ್ಳುವುದೇ ಆಗಿದೆ.

ಹೊರಗಿನ ಪ್ರಾಕೃತಿಕ ಶಕ್ತಿಗಳೊಡನೆ ಹೋರಾಡಿ ತನ್ನ ಜೀವನವನ್ನು ಸುರಕ್ಷಿತಗೊಳಿಸುವುದನ್ನು ಮಾನವ ವಿಜ್ಞಾನದಿಂದ ಕಲಿತುಕೊಳ್ಳುತ್ತ ನಡೆದಿದ್ದಾನೆ: ಆದರೆ ಒಳಗಿನ ಪ್ರತಿಕೂಲ ಶಕ್ತಿಗಳೊಡನೆ ಹೋರಾಡುವುದನ್ನು ಮರೆಯುತ್ತ ನಡೆದಿದ್ದಾನೆ. ಇದರ ಪರಿಣಾಮವಾಗಿ ಜೀವನ ವೃಕ್ಷ ಶಾಖೋಪಶಾಖೆಗಳಿಂದ ಹರಹುಗೊಳ್ಳುತ್ತ ನಡೆದಿದ್ದರೂ ಒಳಗೆ ಹುಳುಹತ್ತಿ ಟೊಳ್ಳಾಗುತ್ತಾ ನಡೆದಿದೆ. ಒಳಗಿನ ಹೋರಾಟ ಮಾನಸಿಕ ಸ್ತರದಲ್ಲಿ ನಡೆಯುತ್ತದೆ. ನಡೆಯಬೇಕು. ಈ ಹೋರಾಟದಲ್ಲಿ ಕಾಲನ ಅಗ್ನಿ ಪರೀಕ್ಷೆಗೆ ಒಳಗಾಗಿ ಉಳಿದು ಬಂದಿರುವ, ಆಯಾ ದೇಶದ ಪರಂಪರೆಯ ಅಮೂಲ್ಯ ಅಂಶಗಳಾಗಿ ಬೆಳಗುತ್ತಿರುವ ಸುಗುಣಗಳೇ ಶಸ್ತ್ರಾಸ್ತ್ರಗಳು. ನಮ್ಮ ಮಟ್ಟಿಗೆ ಸತ್ಯ, ಅಹಿಂಸೆ, ಅಸ್ತೇಯ, ಅಪರಿಗ್ರಹ, ಅಂತರಂಗ ಬಹಿರಂಗಶುದ್ಧಿ, ಶಿಸ್ತು, ಸಂಯಮ, ಪರಸ್ಪರ ಪ್ರೀತಿ, ಸಹಾನುಭೂತಿ, ಪ್ರಾಮಾಣಿಕತೆ, ಕರ್ತವ್ಯ ನಿಷ್ಠೆ, ಆತ್ಮಗೌರವ, ಕಷ್ಟ ಸಹಿಷ್ಣುತೆ, ಸ್ವದೇಶ-ಸ್ವಭಾಷಾ ಪ್ರೇಮ, ಪರಮತ ಪರಭಾಷಾ ಸಹಿಷ್ಣುತೆ, ನಿಸರ್ಗ ಹಾಗೂ ಪರಿಸರಗಳ ಸಂರಕ್ಷಣೆ, ಸಕಲ ಪ್ರಾಣಿಗಳಲ್ಲಿ ದಯೆ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವುದು, ಮಾನವರೆಲ್ಲ ಒಂದು ಕುಲವೆಂದು ಭಾವಿಸುವುದು, ಈಸಬೇಕು ಇದ್ದು ಜೈಸಬೇಕು ಎಂದು ದುಡಿಯುವುದು, ಸಾಧನ ಶುದ್ಧಿ, ವಿತರಣ ಬುದ್ಧಿ, ಸ್ವಾತಂತ್ರ್ಯ ರತಿ, ಸಮಾನತೆ-ಸಹೋದರತೆಗಳ ಅನುಷ್ಠಾನ, ಸರ್ವೋದಯ ನಿಷ್ಠೆ ಇತ್ಯಾದಿಗಳು ಆ ಅಮೂಲ್ಯ ಅಂಶಗಳು.

ನಾವು ಇವೆಲ್ಲವುಗಳಿಗೆ ಎರವಾಗುತ್ತ ನಡೆದಿರುವುದು ಸ್ವಸುಖಾಪೇಕ್ಷೆಯ ಅತಿರೇಕದಿಂದ ಸುಖವೆನ್ನುವುದು ಇಂದ್ರಿಯಗಳ ಸಂತೃಪ್ತಿಯಿಂದ ಸಾಧ್ಯವೆಂಬ ಭ್ರಾಮಕ ಕಲ್ಪನೆಯಿಂದ, ಇಂದ್ರಿಯಗಳ ಸಂತೃಪ್ತಿಗೆ ಹಣ ಹೆಚ್ಚಿದಷ್ಟೂ ಹೆಚ್ಚು ಅನುಕೂಲವೆಂಬ ಭ್ರಾಂತಿಜನ್ಯ ನಂಬಿಕೆಯಿಂದ. ತತ್ಪರಿಣಾಮವಾಗಿ ಲಾಭದ ಲೋಭಕ್ಕೆ ಸಿಕ್ಕಿ ಲಾಭ ಗಳಿಸುವ ಮಾರ್ಗ ಶಿಷ್ಟನಿರಲಿ, ದುಷ್ಟವಿರಲಿ, ಅದನ್ನು ನಿಷ್ಕರುಣೆಯಿಂದ ಅನುಸರಿಸುವ ದುರ್ಬುದ್ಧಿಯಿಂದ ಒಟ್ಟಿನಲ್ಲಿ ಸ್ವಾರ್ಥೈಕ ಪರಾಯಣತೆಯಿಂದ; ಪ್ರತಿಯೊಬ್ಬನೂ ಏಡಿಯಂತೆ ತನ್ನ ಸಿಂಪಿನಲ್ಲಿ ತಾನು ಬಂದಿಯಾಗುತ್ತ ಏಡಿಯಂತೆ ನೆರೆಹೊರೆಯವರನ್ನು ತಿನ್ನುತ್ತ ನಡೆಯಬೇಕೆನ್ನುತ್ತಿದ್ದಾನೆ--ವಿರಳ ಅಪವಾದಗಳನ್ನುಳಿದು.

ಸ್ವರಕ್ಷಣೆ, ವಂಶಾಭಿವೃದ್ಧಿ ಮನೋವಿಕಾಸ ಸಾಧನೆಗಳು ಪ್ರತಿ ಮಾನವನ ಮೂಲೋದ್ದೇಶಗಳಾಗಿರಲು ಸಾಕು. ಸ್ವರಕ್ಷಣೆ ಅನ್ಯರ ಭಕ್ಷಣದಿಂದಲ್ಲ, ರಕ್ಷಣೆಯಿಂದ ಸಾಧ್ಯ; ವಂಶಾಭಿವೃದ್ಧಿ ಕೃತ್ರಿಮ ಜನನ ನಿಯಂತ್ರಣದಿಂದಲ್ಲ, ಸಂಯಮದಿಂದ ಸಾಧಿತವಾಗಬೇಕು. ಮನೋವಿಕಾಸಕ್ಕೆ ಅಡ್ಡಿಯಾಗಿರುವ ಸ್ವಾರ್ಥ, ಇಂದ್ರಿಯ ಲೋಲುಪತೆ, ಅಸಂಯಮಗಳು ತೊಲಗಬೇಕು. ಸುಖದ ಬಗ್ಗೆ ಸರಿಯಾದ ಕಲ್ಪನೆಯಿರಬೇಕು. ಇಲ್ಲಿ ಅಲೆಕ್ಸಿಸ್ ಕೆರೆಲ್ ಹೇಳಿರುವುದು ಮನನೀಯ: "Happiness cannot be attained directly nor is it what we usually imagine it to be. The only happiness which man can attain is that which results from the perfect functioning of body and soul and from the accomplishment of the desting which the order of the things assigns to him.

"The only means, therefore, of attaining happiness is to aim at the widest possible fulfilment of life; It is useless to pursue happiness as an end in itself; when life succeeds as a whole, happiness appears as a bi-product".

ಇಂಥ ಸುಖದ ಗುರಿ ನಮ್ಮದಾದಾಗ ಈ ಸುಖ ಸಾಧನೆಯ ದಾರಿಯಾಗಿ ಮಾನವ ಜೀವನ ದೊಡ್ಡದೆನಿಸುತ್ತದೆ. ಇಲ್ಲದಿದ್ದರೆ ಪಶ್ವಂಶ ಪೂರಿತವಾಗಿ ಪಶುಗಳ ಮಟ್ಟಕ್ಕಿಳಿಯುತ್ತದೆ. ಆಗ ಈ ಅರ್ಥಪೂರ್ಣ ಜೀವನವೂ ಕೆಲವರಿಗೆ ಅರ್ಥಶೂನ್ಯವಾಗಿ, ವ್ಯರ್ಥವಾಗಿ ತೋರುತ್ತದೆ. ಜೀವನದ ಅರ್ಥ ಹುಡುಕುವುದರಲ್ಲಿಯೇ ಆಯುಷ್ಯ ಕಳೆದರೆ ಸಾರ್ಥಕ ಜೀವನ ಆರಂಭಿಸುವುದು ಯಾವಾಗ? ಯುಗಯುಗಗಳ ಮಾನವ ಜೀವನ ಅರಸಿಕಂಡುಕೊಂಡ ಪುರುಷಾರ್ಥಗಳೆಂಬುವು ಮೌಲ್ಯಗಳೆಂಬುವು ಇವೆ. ಆ ಪುರುಷಾರ್ಥಗಳಲ್ಲಿ, ಮೌಲ್ಯಗಳಲ್ಲಿ ವಿಶ್ವಾಸವಿಟ್ಟು, ಆ ಪುರುಷಾರ್ಥ ಸಾಧನೆಗಾಗಿ ತನ್ನ ಬಾಹ್ಯಾಂತರಿಕ ಶಕ್ತಿ ಸದ್ಗುಣಗಳನ್ನು ಉಪಯೋಗಿಸಿಕೊಂಡು ಹೋರಾಡುತ್ತ ಹೋದರೆ ಸುಖ, ಸಂತೃಪ್ತಿ, ಸಮೃದ್ಧಿ, ಸಂಸ್ಕೃತಿಗಳು ನಮ್ಮವಾಗುತ್ತವೆ. ಇವನ್ನು ನೀಡಬಲ್ಲ ಮಾನವ ಜೀವನ ವ್ಯರ್ಥವಲ್ಲ, ನಿಜವಾಗಿ ದೊಡ್ಡದು. ಜೀವನಕ್ಕೆ ತನ್ನದೇ ಆದ ಅರ್ಥವಿರಲಿ, ಇಲ್ಲದಿರಲಿ - ನಾವು ಕೊಡುವ ಅರ್ಥವಂತೂ ಇದ್ದೇ ಇರುತ್ತವೆ. ಒಳ್ಳೆಯ ಅರ್ಥವನ್ನು ನಾವು ಅದರಲ್ಲಿ ತುಂಬಬೇಕಾದರೆ ಮೇಲೆ ವಿವರಿಸಿದ, ವಿವರಿಸದೆ ಉಳಿದಿರಬಹುದಾದ ಅಂಶಗಳನ್ನು ಮನದಟ್ಟು ಮಾಡಿಕೊಂಡು ಅವುಗಳನ್ನು ಹಿಂಡಿ ಒಳ್ಳೆಯ ಅರ್ಥವನ್ನು ಗ್ರಹಿಸಿಕೊಳ್ಳಬೇಕು. ನನಗೆ ನಾನೆಂದುಕೊಂಡಿರುವದು ಇದು:

"ಬದುಕಿಗೆ ಅರ್ಥವಿಲ್ಲವೆಂದವನೂ ಬದುಕಲೇಬೇಕು;  
ಅರ್ಥವಿದೆಯೆಂದವನೂ ಬದುಕಲೇಬೇಕು;  
ಬದುಕುವುದು ಅನಿವಾರ್ಯವೆಂದಾಗ  
ಅರ್ಥವಿಲ್ಲದ ಬದುಕಿಗೂ ಅರ್ಥಬರುವಂತೆ  
ಬದುಕುವುದೇ ಲೇಸಲ್ಲವೇನಯ್ಯ - ಸ್ವತಂತ್ರಧೀರ ಸಿದ್ಧೇಶ್ವರಾ:

ಮಾನವ ಜೀವನವೊಂದು ಮಹತ್ಸಾಧನೆಗಳಿಗಾಗಿ ದೊರೆತ ಅವಕಾಶ. ಈ ಅರ್ಥದಲ್ಲಿಯೂ "ಮಾನವ ಜೀವನ ದೊಡ್ಡದು: ಅದನ್ನು ಹಾನಿಮಾಡಬೇಡಿ ಹುಚ್ಚಪ್ಪಗಳಿರಾ"!